# ದೋನಿ ಬ್ರ್ಯಾಂಡ್!

...25ನೇ ಪುಟದಿಂದ

ಬಿಡುವುದು ಅವರವರ ವೈಯಕ್ತಿಕ ವಿಚಾರ. ದೋನಿ ಈ ವಿಷಯದಲ್ಲಿ 'ಸಂಭಾವಿತ'ರಾಗಿ ಇದ್ದುಬಿಡಲು ನಿರ್ಧರಿಸಿದರು. ಕೊಹ್ಲಿಯ ವ್ಯವಸ್ಥಾಪಕ ಮಾರುಕಟ್ಟೆಯನ್ನು ಬಳಸಿಕೊಳ್ಳುವ ತಂತ್ರಕ್ಕೆ ಮನಸೋಲುವಂತೆ ತಮ್ಮ ಒಡೆಯನನ್ನು ಅಣಿಗೊಳಿಸಿದರು. ಕೊಹ್ಲಿ ಮಾರುಕಟ್ಟೆ ಪಾಲಿಗೆ ಚಂಚಲ ಚಿತ್ತ. ದೋನಿ ಸ್ಥಿತಪ್ರಜ್ಞ. ದೋನಿಯ ಪ್ರಮುಖ ನಿರ್ಧಾರಗಳ ಕಡೆ ನಿಗಾ ವಹಿಸುತ್ತಾ ಬಂದಿರುವ ಅರುಣ್ ಪಾಂಡೆ ಒಂದು ಕಾಲದಲ್ಲಿ ರಣಜಿ ಕ್ರಿಕೆಟ್ ಆಟಗಾರ ಆಗಿದ್ದವರು. ದೋನಿ ಅವರನ್ನು ನಂಬಿದರೆ, ಅವರು ತನ್ನ ಒಡೆಯ ಯಾವ ವಿವಾದಕ್ಕೂ ಸಿಲುಕಿಕೊಳ್ಳದಂತೆ ನಿಗಾ ವಹಿಸಿದರು.

ಐಪಿಎಲ್‌ನಲ್ಲಿ ಚೆನ್ನೈ ಸೂಪರ್‌ಕಿಂಗ್ಸ್ ಪರವಾಗಿ ದೋನಿ ಆಡಿದ ಮೇಲೆ ಅವರ ಬ್ರಾಂಡ್ ಮೌಲ್ಯ ಬೇರೆಯದೇ ಮಜಲಿನಲ್ಲಿ ಹೆಚ್ಚಾಯಿತು. ಖುದ್ದು ಜಾಹೀರಾತು ಚಿತ್ರೀಕರಣ ಮಾಡದೆಯೂ ಸಾಧ್ಯವಿರುವ ಬ್ರಾಂಡ್‌ಗಳ ಭಾಗವಾಗಲು ದೋನಿ ಹೆಚ್ಚು ಒಪ್ಪತೊಡಗಿದ್ದೇ ಐಪಿಎಲ್ ಜ್ವರ ಕಾವೇರಿದ ಮೇಲೆ. ಚೆನ್ನೈ ಸೂಪರ್‌ಕಿಂಗ್ಸ್ ಒಡೆತನದ ವಿವಾದ, ಬೆಟ್ಟಿಂಗ್ ವಿವಾದ ಭುಗಿಲೆದ್ದಾಗಲೂ ದೋನಿ ಹೆಸರು ಕೇಳಿಬಂದಿತ್ತು. ಆದರೆ, ಅವರು ಅದರಿಂದ ಕಿಂಚಿತ್ತೂ ವಿಚಲಿತರಾಗದೆ ಅಗ್ನಿದಿವ್ಯದಿಂದ ಹೊರಬಂದಂತೆ ನಕ್ಕರು. ಮತ್ತೆ ನಾಯಕನ ಟೋಪಿ ತೊಟ್ಟು ಚುಟುಕು ಕ್ರಿಕೆಟ್ ಅಂಗಳದಲ್ಲಿ ನಿಂತರು.

2005ರಲ್ಲಿ ಪೆಪ್ಸಿ ಕೊ ಜಾಹೀರಾತಿನಿಂದ ಶುರುವಾದ ದೋನಿಯ ಬ್ರಾಂಡಿಂಗ್ ದೊಡ್ಡ ಪಯಣ ಆಮೇಲೆ ಎಣಿಕೆ ತಪ್ಪುವಷ್ಟು ಬ್ರಾಂಡ್‌ಗಳಿಗೆ ವಿಸ್ತರಿಸುತ್ತಾ ಬಂದಿತು. ವರ್ಷದಿಂದ ವರ್ಷಕ್ಕೆ ಈ ಬ್ರಾಂಡಿಂಗ್ ವರಸೆಗಳ ಬದಲಾವಣೆಗೂ ಅವರು ಒಗ್ಗುತ್ತಲೇ ಬಂದರು ಅಥವಾ ವ್ಯವಸ್ಥೆಯೇ ಅವರನ್ನು ಒಗ್ಗಿಸಿಕೊಂಡಿತು.

ರೀಬಾಕ್, ಎಕ್ಸೈಡ್, ಟಿವಿಎಸ್ ಮೋಟಾರ್ಸ್, ಮೈಸೂರು ಸ್ಯಾಂಡಲ್ ಸೋಪ್ (ಇದಕ್ಕೂ ಅವರಿಗೆ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮವು ಹತ್ತು ವರ್ಷಗಳ ಹಿಂದೆಯೇ ವರ್ಷಕ್ಕೆ ಐದು ಕೋಟಿ ರೂಪಾಯಿ ನೀಡಿತ್ತು), ವಿಡಿಯೊಕಾನ್, ರಿಲಯನ್ಸ್ ಕಮ್ಯುನಿಕೇಷನ್ಸ್, ಭಾರತ್ ಪೆಟ್ರೋಲಿಯಂ, ಜಿಇ ಮನಿ, ಬಿಗ್ ಬಜಾರ್, ಬೂಸ್ಟ್, ದೈನಿಕ್ ಭಾಸ್ಕರ್. ಹೀಗೆ ದೋನಿ ಮಧ್ಯಮವರ್ಗದ ಗ್ರಾಹಕರನ್ನೇ ಹೆಚ್ಚಾಗಿ ಗುರಿಯಾಗಿಸಿಕೊಂಡ ಬ್ರಾಂಡ್‌ಗಳ ಭಾಗವಾದದ್ದೇ ಹೆಚ್ಚು. ಇದನ್ನು ಅವರ ಜನಪ್ರಿಯ ತಂತ್ರವೆಂದೇ ನೋಡಬಹುದು.

ದೋನಿ ಫೋರ್ಬ್ಸ್ ಶ್ರೀಮಂತರ ಪಟ್ಟಿಯಲ್ಲಿ ಕಳೆದೆರಡು ವರ್ಷ ಇದ್ದ ಏಕೈಕ ಭಾರತೀಯ. 2015ರಲ್ಲಿ ಅವರ ಗಳಿಗೆ ಸುಮಾರು 210 ಕೋಟಿ ರೂಪಾಯಿ. ಇದರಲ್ಲಿ ಎಂಟನೇ ಒಂದು ಭಾಗ ಮಾತ್ರ ಆಟದ ಸಂಬಳದಿಂದ ಬಂದದ್ದು. ಕಳೆದ ವರ್ಷ ಫೋರ್ಬ್ಸ್ ಪಟ್ಟಿಯ ನೂರು ಶ್ರೀಮಂತರಲ್ಲಿ 23ನೇ ಸ್ಥಾನದಲ್ಲಿದ್ದ ದೋನಿ, 2014ರಲ್ಲಿ 22ನೇ ಸ್ಥಾನದಲ್ಲಿದ್ದರು.

ಈಗ ಅವರು ನಾಯಕತ್ವದ ಕುರ್ಚಿಯಿಂದ ಕೆಳಗಿಳಿದಿದ್ದಾರೆ. ಸಹಜವಾಗಿಯೇ ಬ್ರಾಂಡ್ ಆದಾಯದಲ್ಲೂ ಇಳಿಕೆ ಆಗುತ್ತದೆ. ಆದರೆ, ಆಟಗಾರನಾಗಿ ಅವರ ವರ್ಚಸ್ಸು ಇನ್ನು ಮುಂದೆ ಹೇಗೆ ಮುಂದುವರಿಯಲಿದೆ ಎನ್ನುವುದರ ಮೇಲೆ ಹೊಸ ಮಾರುಕಟ್ಟೆ ಲೆಕ್ಕಾಚಾರಗಳೂ ರೂಪಿತಗೊಳ್ಳುತ್ತವೆ. ಕಳೆದ ಒಂದು ದಶಕದಲ್ಲಿ ದೋನಿ ಖುದ್ದು ಭಾರತದ ದೊಡ್ಡ ಬ್ರಾಂಡ್ ಆಗಿ ಬೆಳೆದ ಪರಿಯೇ ಸೋಜಿಗ ಮೂಡಿಸುವಂಥದ್ದು.

ಈ ಲೇಖನದ ಪ್ರಾರಂಭದಲ್ಲಿ ಬರೆದ ಅಧ್ಯಾಯಗಳಿಗೆ ಇನ್ನಷ್ಟನ್ನು ಸೇರಿಸಬೇಕು. ಅದು ಸಾಧ್ಯವಾಗುವುದು ದೋನಿ ಇನ್ನು ಆಡುವುದೇ ಇಲ್ಲ ಎಂದು ತೀರ್ಮಾನಿಸಿದ ಮೇಲೆಯೇ. ಅದುವರೆಗೆ ಲೆಕ್ಕಾಚಾರಗಳು ಮುಂದುವರಿಯುತ್ತಲೇ ಇರುತ್ತವೆ.




